ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001,ಕರ್ನಾಟಕ
**E-mail ID:** icps.kar@gmail.com **Ph.No.080-22879381/82**

ಸಂಖ್ಯೆ: ಐ.ಸಿ.ಪಿ.ಎಸ್/ಜೆಸಿಎಲ್ ಮಹೇಶ್ ಫೌಂಡೇಷನ್/2016-17/463 ದಿನಾಂಕ: 21-09-2016

ಗೆ,

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಬೆಳಗಾಂ ಜಿಲ್ಲೆ.

ಮಾನ್ಯರೇ,

ವಿಷಯ:ಮಹೇಶ್ ಫೌಂಡೇಶನ್ ಸಂಸ್ಥೆಯಡಿಯಲ್ಲಿ ಆಶಾಕಿರಣ ಮಕ್ಕಳ ಗೃಹವನ್ನು ಅರ್ಹವ್ಯಕ್ತಿ ಸಂಸ್ಥೆಯೆಂದು ಮಾನ್ಯತೆ ನೀಡಿರುವ ನೀಡಿದ ಬಗ್ಗೆ.

ಉಲ್ಲೇಖ:ಸರ್ಕಾರದ ಆದೇಶ ಸಂಖ್ಯೆ: ಮಮಇ/227/ಮಭಾಬ/2013, ಬೆಂಗಳೂರು ದಿನಾಂಕ:19.08.2016

------

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಹೇಶ್ ಫೌಂಡೇಶನ್ ಸಂಸ್ಥೆಯಡಿಯಲ್ಲಿ ಬರುವ ಆಶಾಕಿರಣ ಮಕ್ಕಳ ಗೃಹವನ್ನು ಅರ್ಹವ್ಯಕ್ತಿ ಸಂಸ್ಥೆಯೆಂದು ಉಲ್ಲೇಖದ ಆದೇಶದಲ್ಲಿ ಮಾನ್ಯತೆ ನೀಡಿದೆ. ಸದರಿ ಆದೇಶವನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

"ಯೋಜನಾ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ"

ತಮ್ಮ ವಿಶ್ವಾಸಿ,

ಯೋಜನಾ ನಿರ್ದೇಶಕರ ಪರವಾಗಿ,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ,
ಬೆಂಗಳೂರು.

ಪ್ರತಿಯನ್ನು:
ಬೆಳಗಾವಿ ಸಿದ್ದೇಶ್ವರನಗರ ಕಲಬುರ್ತಯಲ್ಲಿರುವ ಮಹೇಶ್ ಫೌಂಡೇಶನ್ ಇವರ ಮಾಹಿತಿಗಾಗಿ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೆಳಗಾವಿಯ ಸಿದ್ದೇಶ್ವರ ನಗರ, ಕನಬರಗಿಯಲ್ಲಿ ಮಹೇಶ್ ಫೌಂಡೇಷನ್ ಸಂಸ್ಥೆಯು ನಡೆಸುತ್ತಿರುವ ಆಶಾಕಿರಣ ಮಕ್ಕಳ ಗೃಹವನ್ನು ಅರ್ಹ ಸಂಸ್ಥೆಯೆಂದು ಮಾನ್ಯತೆ ನೀಡುವ ಬಗ್ಗೆ.

**ಓದಲಾಗಿದೆ:–** ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಬೆಂಗಳೂರು ಇವರ ಪತ್ರ ಸಂಖೆ: ಐಸಿಪಿಎಸ್/ಜೆಸಿಎಲ್/ಮಹೇಶ್ ಫೌಂಡೆಷನ್/ 2014–15, ದಿನಾಂಕ: 22.05.2015, 16.07.2015, 15.10.2015, 25.04.2016 ಮತ್ತು 05.07.2016.

*ಪ್ರಸ್ತಾವನೆ:–*

ಮೇಲೆ ಓದಲಾದ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಬೆಂಗಳೂರು ಇವರ ಪತ್ರಗಳಲ್ಲಿ ಬೆಳಗಾವಿಯ ಸಿದ್ದೇಶ್ವರ ನಗರ, ಕನಬರಗಿಯಲ್ಲಿ ಮಹೇಶ್ ಫೌಂಡೇಷನ್ ಸಂಸ್ಥೆಯಡಿಯಲ್ಲಿ "ಆಶಾ ಕಿರಣ" ಮಕ್ಕಳ ಗೃಹ ಸಂಸ್ಥೆಯು ಹೆಚ್.ಐ.ವಿ ಸೊಂಕಿತ/ಬಾಧಿತ ಮಕ್ಕಳ ಪಾಲನೆ ಪೋಷಣೆಗಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಸಂಸ್ಥೆಯು ಅರ್ಹ ಸಂಸ್ಥೆಯೆಂದು ಬಾಲನ್ಯಾಯ ತಿದ್ದುಪಡಿ ಕಾಯ್ದೆ 2006 ರ ಸೆಕ್ಷನ್ 34(3)ರ ಪ್ರಕಾರ ದಿನಾಂಕ 13.09.2012 ರಂದು ನೊಂದಣೆಯಾಗಿರುತ್ತದೆ. ಸದರಿ ಸಂಸ್ಥೆಯು **ಬಾಡಿಗೆ ಕಟ್ಟಡವನ್ನು ಹೊಂದಿದ್ದು** ಹಾಗೂ ಉತ್ತಮ ಮೂಭೂತ ಸೌಕರ್ಯಗಳಿಂದ ಕೂಡಿದ್ದು, ಮಕ್ಕಳು ಚಟುವಟಿಕೆಯಿಂದ ಸಂತೋಷದಿಂದ ಇರುವುದಾಗಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಳಗಾವಿ ಇವರು ದಿನಾಂಕ: 18.12.2013ರಂದು ಸದರಿ ಸಂಸ್ಥೆಗೆ ಭೇಟಿ ನೀಡಿ ತಪಾಸಣಾ ವರದಿಯನ್ನು ದಿನಾಂಕ: 19.12.2013ರಂದು ಸಲ್ಲಿಸಿರುವುದಾಗಿ ತಿಳಿಸಿರುವರು.

ಮಹೇಶ್ ಫೌಂಡೇಷನ್ ಸಂಸ್ಥೆಯಡಿಯಲ್ಲಿ ಆಶಾಕಿರಣ ಮಕ್ಕಳ ಗೃಹವನ್ನು ಅರ್ಹ ಸಂಸ್ಥೆಯೆಂದು ಮಾನ್ಯತೆ ನೀಡಲು ಬಾಲನ್ಯಾಯ ಕಾಯ್ದೆ 2000 ಮತ್ತು 2006 ರ ತಿದ್ದುಪಡಿ ಅಡಿಯಲ್ಲಿ ಸದರಿ ಸಂಸ್ಥೆಯನ್ನು ಅರ್ಹ ಸಂಸ್ಥೆಯೆಂದು ಮಾನ್ಯತೆ ನೀಡಲು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯು ಶಿಫಾರಸ್ಸು ಪತ್ರ ಪಡೆದಿರುತ್ತದೆ ಎಂದು ಯೋಜನಾ ನಿರ್ದೇಶಕರು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಇವರು ತಿಳಿಸುತ್ತಾ, ಬೆಳಗಾವಿಯ ಸಿದ್ದೇಶ್ವರ ನಗರ, ಕನಬರಗಿಯಲ್ಲಿ ಮಹೇಶ್ ಫೌಂಡೇಷನ್ ಸಂಸ್ಥೆಯು ನಡೆಸುತ್ತಿರುವ "ಆಶಾಕಿರಣ" ಮಕ್ಕಳ ಗೃಹವನ್ನು ಅರ್ಹ ಸಂಸ್ಥೆಯೆಂದು ಮಾನ್ಯತೆ ನೀಡಿ ಆದೇಶ ಹೊರಡಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಕಂಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ.ಮಮಇ 227 ಮಭಾಬ 2013, ಬೆಂಗಳೂರು ದಿನಾಂಕ: .08.2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿಯ ಸಿದ್ದೇಶ್ವರ ನಗರ, ಕನಬರಗಿಯಲ್ಲಿ ಮಹೇಶ್ ಫೌಂಡೇಷನ್ ಸಂಸ್ಥೆಯು ನಡೆಸುತ್ತಿರುವ "ಆಶಾಕಿರಣ" ಮಕ್ಕಳ ಗೃಹವನ್ನು ಬಾಲನ್ಯಾಯ ಕರ್ನಾಟಕ ನಿಯಮ 2010 ನಿಯಮ 81(1) (2) ರ ಪ್ರಕಾರ ಅರ್ಹ ಸಂಸ್ಥೆಯೆಂದು ಮಾನ್ಯತೆ ನೀಡಿ ಆದೇಶಿಸಲಾಗಿದೆ.

ಮೇಲ್ಕಂಡ ಸಂಸ್ಥೆಯು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ), ಅಧಿನಿಯಮ 2000 ತಿದ್ದುಪಡಿ 2006ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಮಾನ್ಯತೆಯನ್ನು ರದ್ದುಗೊಳಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಂಧ್ಯಾ. ಎಲ್. ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಬೆಂಗಳೂರು
4. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ ಜಿಲ್ಲೆ.
5. ಅಧ್ಯಕ್ಷರು, ಮಹೇಶ್ ಫೌಂಡೇಷನ್ ಸಂಸ್ಥೆ "ಆಶಾಕಿರಣ" ಮಕ್ಕಳ ಗೃಹ ಸಿದ್ದೇಶ್ವರ ನಗರ, ಕನಬರಗಿ, ಬೆಳಗಾವಿ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.